**OS 30/2019**
**DW-2**

**ದಿಃ 05.03.2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರಿದ ಪಾಟೀ ಸವಾಲುಃ ವಾದಿ ಪರ ಶ್ರೀ ಎಂ ಎಸ್ ಆರ್ ವಕೀಲರಿಂದ**

ನಾನು ಕಳೆದ ಬಾರಿ ಹಾಕಿದ ದಾಖಲೆಗಳ ಬಗ್ಗೆ ಮಾಹಿತಿ ಇರುತ್ತದೆ. 2011-12 ರಲ್ಲಿ 2 ನೇ ಪ್ರತಿವಾದಿಯು ತನ್ನ ಹೆಸರಿಗೆ ಖಾತೆ ಬದಲಾವಣೆ ಮಾಡಿಕೊಳ್ಳುವ ಪೂರ್ವದಲ್ಲಿ ಇರುವ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ ಎಂದರೆ ಸಾಕ್ಷಿಯು ಪೌತಿ ಆಧಾರದ ಮೇರೆಗೆ ಖಾತೆ ಬದಲಾವಣೆ ಆಗಿರುವ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೇನೆ ಎಂದು ನುಡಿಯುತ್ತಾರೆ. 2 ನೇ ಪ್ರತಿವಾದಿಯ ಕುಟುಂಬದ ದಾವಾದ ಆಸ್ತಿಯ ಹೇಗೆ ಬಂದಿತು ಎಂದು ತೋರಿಸಲು ಕೈಬರಹದ ಪಹಣಿ ಮತ್ತು ಅವರ ಕುಟುಂಬದ ವಂಶವೃಕ್ಷ ಹಾಜರುಪಡಿಸಲು ತೊಂದರೆ ಇಲ್ಲ ಎಂದರೆ ಸಾಕ್ಷಿಯು ನನಗೆ ಅವಶ್ಯಕತೆ ಇಲ್ಲ ಹಾಗಾಗಿ ಹಾಜರುಪಡಿಸಿಲ್ಲ ಎಂದು ನುಡಿಯುತ್ತಾರೆ. 2 ನೇ ಪ್ರತಿವಾದಿಯ ತಂದೆಯ ಹೆಸರು ನನಗೆ ಗೊತ್ತಿಲ್ಲ. 2 ನೇ ಪ್ರತಿವಾದಿಯ ತಂದೆಯ ಹೆಸರನ್ನು ಅವರ ಕಡೆಯಿಂದ ಕೇಳಿ ತಿಳಿದುಕೊಳ್ಳಲು ತೊಂದರೆ ಇತ್ತೇ ಎಂದರೆ ಸಾಕ್ಷಿಯು ನಾನು ತಿಳಿದುಕೊಂಡಿಲ್ಲ ಎಂದು ನುಡಿಯುತ್ತಾರೆ. ಸ.ನಂ 96/4 ಕ್ಕೆ 4 ಜನರ ಹೆಸರು ನಮೂದು ಆಗಿರುತ್ತದೆ ಎಂದರೆ ಸಾಕ್ಷಿಯು ನನಗೆ ಅದರ ಅವಶ್ಯಕತೆ ಇಲ್ಲ ಹಾಗಾಗಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ದಾವಾದ ಆಸ್ತಿಯ ಸ.ನಂ. 96/4 ಇರುತ್ತದೆ. ಸ.ನಂ. 96/4 ಕ್ಕೆ 1969-70 ರಲ್ಲಿ ಕರಿಯಪ್ಪ ಬಿನ್ ಹನುಮಂತಪ್ಪರವರ ಹೆಸರು ನಮೂದು ಆಗಿರುವ ಬಗ್ಗೆ ನನಗೆ ಗೊತ್ತಿಲ್ಲ. ಸ.ನಂ. 96/1 ರಲ್ಲಿ 2 ಎಕರೆ 36 ಗುಂಟೆಗೆ ಭೀಮಪ್ಪ ಬಿನ್ ಹನುಮಂತಪ್ಪ ರವರ ಹೆಸರು 1969-70 ರಲ್ಲಿ ನಮೂದು ಇರುವ ಬಗ್ಗೆ ನನಗೆ ಗೊತ್ತಿಲ್ಲ. 2 ನೇ ಪ್ರತಿವಾದಿಯ ತಾಯಿಯ ಹೆಸರು ನನಗೆ ಗೊತ್ತಿಲ್ಲ. 2 ನೇ ಪ್ರತಿವಾದಿಯ ತಂದೆಯ ಹೆಸರು ಭೀಮಪ್ಪ, ತಾಯಿಯ ಹೆಸರು ಗಂಗಮ್ಮ ಇರುವ ಬಗ್ಗೆ ನನಗೆ ಗೊತ್ತಿಲ್ಲ. 2 ನೇ ಪ್ರತಿವಾದಿಯ ತಂದೆ ಭೀಮಪ್ಪನ ಹೆಸರಿಗೆ ಸ.ನಂ. 96/1 ರಲ್ಲಿ 2 ಎಕರೆ 36 ಗುಂಟೆ ಜಮೀನು ಇರುವ ಬಗ್ಗೆ ನನಗೆ ಗೊತ್ತಿಲ್ಲ. ಭೀಮಪ್ಪನ ಮರಣದ ನಂತರ ಸದರಿ ಜಮೀನು ಅವರ ಹೆಂಡತಿ ಗಂಗಮ್ಮನ ಹೆಸರಿಗೆ ನಮೂದು ಆಗಿರುವ ಬಗ್ಗೆ ನನಗೆ ಗೊತ್ತಿಲ್ಲ. ಸ.ನಂ. 96/1 2 ಎಕರೆ 36 ಗುಂಟೆ ಜಮೀನು ಗಂಗಮ್ಮನ ಮರಣದ ನಂತರ 2 ನೇ ಪ್ರತಿವಾದಿ ಸೇರಿ ಅವರ 4 ಜನ ಮಕ್ಕಳ ಹೆಸರಿಗೆ ಜಂಟಿ ಖಾತೆ ಆದ ಬಗ್ಗೆ ನನಗೆ ಗೊತ್ತಿಲ್ಲ. ದಾವಾದ ಆಸ್ತಿಯೇ ಬೇರೆ ಮತ್ತು 2 ನೇ ಪ್ರತಿವಾದಿಯ ಹೆಸರಿಗೆ ಖಾತೆ ಆದ ಆಸ್ತಿಯೇ ಬೇರೆ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. 2 ನೇ

ಪ್ರತಿವಾದಿಯ ಕುಟುಂಬದ ಬಗ್ಗೆ ಯಾರಿಗೆ ಮಾಹಿತಿ ಇರುತ್ತದೆ ಎಂದು 2 ನೇ ಪ್ರತಿವಾದಿಯನ್ನೇ ಕೇಳಬೇಕು. ನನಗೆ 2 ನೇ ಪ್ರತಿವಾದಿಯ ವಂಶದ ಬಗ್ಗೆ ಮಾಹಿತಿ ಇಲ್ಲ. ದಾವಾದ ಆಸ್ತಿಯನ್ನು ಮೋಸ ಮಾಡಿ ಕಬಳಿಸುವ ಉದ್ದೇಶದಿಂದ ನಾನು, 2 ಮತ್ತು 3 ನೇ ಪ್ರತಿವಾದಿಯರ ಜೊತೆ ಶಾಮೀಲಾಗಿ ದಾಖಲೆಗಳನ್ನು ಸೃಷ್ಟಿ ಮಾಡಿಕೊಂಡಿರುತ್ತೇನೆ ಎಂದರೆ ಸರಿಯಲ್ಲ.

**ಮುಂದುವರಿದ ಪಾಟೀ ಸವಾಲುಃ 1(ಎ) ರಿಂದ (ಡಿ) ಪ್ರತಿವಾದಿ ಪರ ಶ್ರೀ ಹೆಚ್ ಟಿ ವಕೀಲರಿಂದ**

ವಾದಿಯರು ಈ ದಾವೆಯನ್ನು ಯಾವ ಕಾರಣಕ್ಕೆ ದಾಖಲಿಸಿದ್ದಾರೆ ಎಂದು ನನಗೆ ಮಾಹಿತಿ ಇರುತ್ತದೆ. ಕರಿಯಪ್ಪನ ವಾರಸುದಾರರು ಕರಿಯಮ್ಮ ಇರುತ್ತಾರೆ ಎಂದರೆ ಸರಿಯಲ್ಲ. ಈ ದಾವೆಯ 1 ನೇ ಪ್ರತಿವಾದಿ ಕರಿಯಮ್ಮ ಇರುವ ಬಗ್ಗೆ ಗೊತ್ತು. ಕರಿಯಮ್ಮನೇ ಕರಿಯಪ್ಪನ ಒಬ್ಬರೇ ವಾರಸುದಾರರು ಎಂದರೆ ಸರಿಯಲ್ಲ. ಕರಿಯಮ್ಮರವರು ತಾನು ಕರಿಯಪ್ಪನ ವಾರಸುದಾರರು ಎಂದು ಹೇಳಿ ದಾವಾದ ಆಸ್ತಿಗೆ ಸಂಬಂಧಿಸಿದಂತೆ ಕೆಳ ನ್ಯಾಯಾಲಯದಲ್ಲಿ ಅಸಲು ದಾವೆ ನಂ. 171/2018 ನ್ನು ನನ್ನ ಹೆಂಡತಿ ಮತ್ತು ಈ ದಾವೆಯ 2 ನೇ ಪ್ರತಿವಾದಿ ವಿರುದ್ದ ದಾಖಲಿಸಿರುತ್ತಾರೆ ಎಂದರೆ ಸಾಕ್ಷಿಯು ಸುಳ್ಳು ದಾವೆಯನ್ನು ದಾಖಲಿಸಿರುತ್ತಾರೆ ಎಂದು ನುಡಿಯುತ್ತಾರೆ. ಆ ದಾವೆಯಲ್ಲಿ ಕರಿಯಮ್ಮನೇ ಹಕ್ಕುದಾರರು ಎಂದು ಹೇಳಿ ಮಧ್ಯಂತರ ತಡೆಯಾಜ್ಞೆ ಆದೇಶ ಮಾಡಿರುತ್ತದೆ ಎಂದರೆ ಸಾಕ್ಷಿಯು ಹಕ್ಕುದಾರರು ಎಂದು ಮಾಡಿಲ್ಲ ಎಂದು ನುಡಿಯುತ್ತಾರೆ. ಸದರಿ ಆದೇಶದ ವಿರುದ್ದ ನನ್ನ ಹೆಂಡತಿ ಮತ್ತು 2 ನೇ ಪ್ರತಿವಾದಿಯು ಇದೇ ನ್ಯಾಯಲಾಯದಲ್ಲಿ ಎಂ. ಎ ನಂ. 5/2019 ನ್ನು ದಾಖಲಿಸಿದ ಬಗ್ಗೆ ನನಗೆ ನೆನಪಿಲ್ಲ. ಎಂ. ಎ ನಂ. 5/2019 ವಜಾ ಆದ ನಂತರ 2 ನೇ ಪ್ರತಿವಾದಿಯು ಸದರಿ ಆದೇಶದ ವಿರುದ್ದ ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ರಿಟ್ ನಂ. 3928/2020 ಹಾಕಿರುವ ಬಗ್ಗೆ ನನಗೆ ನೆನಪಿಲ್ಲ. ಸದರಿ ರಿಟ್ ನಲ್ಲಿ ದಿನಾಂಕ 26.05.2023 ರಂದು ಆದೇಶ ಆದ ಬಗ್ಗೆ ನನಗೆ ಗೊತ್ತಿಲ್ಲ. ಸದರಿ ರಿಟ್ ಪಿಟಿಷನ್ ನಲ್ಲಿ ನನ್ನ ಹೆಂಡತಿ 3 ನೇ ಎದುರುದಾರರು ಎಂದರೆ ಸರಿ. 2 ನೇ ಪ್ರತಿವಾದಿಯ ತಂದೆಯ ಹೆಸರು ಭೀಮಪ್ಪ ಆಗಿದ್ದರು ಸಹ ಕರಿಯಪ್ಪ ಎಂದು 1 ನೇ ಪ್ರತಿವಾದಿಗೆ ಸಂಬಂಧಿಸಿದ ಆಸ್ತಿಯನ್ನು ಕಬಳಿಸುವ ಉದ್ದೇಶದಿಂದ ಸುಳ್ಳು ದಾಖಲೆಗಳನ್ನು ಸೃಷ್ಟಿ ಮಾಡಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ದಾವಾದ ಆಸ್ತಿಯು 1 ನೇ ಪ್ರತಿವಾದಿ ಮತ್ತು ಅವರ ಕುಟುಂಬದವರಿಗೆ ಸಂಬಂಧಿಸಿದ ಆಸ್ತಿ ಇದ್ದರು ಸಹ ದಾವಾದ ಆಸ್ತಿಯನ್ನು ಕಬಳಿಸುವ ಉದ್ದೇಶದಿಂದ ಸುಳ್ಳು ದಾಖಲೆಗಳನ್ನು ಸೃಷ್ಟಿ ಮಾಡಿಕೊಂಡು ಸುಳ್ಳು ಸಾಕ್ಷಿ ನುಡಿಯುತ್ತಿರುವೆ ಎಂದರೆ ಸರಿಯಲ್ಲ. ದಾವಾದ ಆಸ್ತಿಯಲ್ಲಿ ಈಗಲೂ ಸಹ 1 ನೇ ಪ್ರತಿವಾದಿಯ ಕುಟುಂಬದವರೇ ಸ್ವಾಧೀನದಲ್ಲಿ ಇರುತ್ತಾರೆ ಎಂದರೆ ಸರಿಯಲ್ಲ.

**OS 30/2019**
**DW-2**

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ ಎಂ ಎಫ್ ಸಿ., ಚನ್ನಗಿರಿ.